

ಆಗಸದಿಂದ ಇಗ್ವಾಸು ಜಲಪಾತದ ನಯನಮನೋಹರ ದೃಶ್ಯ



ಜಲಧಾರೆಗಳ ಸಮ್ಮಿಲನ

ಸ್ಟೀವನ್ ಸ್ಪೀಲ್‌ಬರ್ಗ್ ನಿರ್ದೇಶನದ 'ಇಂಡಿಯಾನಾ ಜೋನ್ಸ್ ಅಂಡ್ ದಿ ಕಿಂಗ್‌ಡಂ ಆಫ್ ದಿ ಕ್ರಿಸ್ಟಲ್ ಸ್ಕಲ್' ಚಲನಚಿತ್ರದಲ್ಲಿ ರೋಮಾಂಚನಗೊಳಿಸುವ ಜಲಪಾತದ ದೃಶ್ಯಾವಳಿಗಳಿವೆ. ಅದುವೇ ವಿಶ್ವದ ಏಳು ಆಧುನಿಕ ನೈಸರ್ಗಿಕ ಅದ್ಭುತಗಳಲ್ಲಿ ಒಂದಾದ 'ಇಗ್ವಾಸು ಜಲಪಾತ'. ಜೇಮ್ಸ್ ಬಾಂಡ್‌ನ 'ಮೂನ್ ರೇಕರ್' ಚಲನಚಿತ್ರದಲ್ಲಿಯೂ ಈ ಜಲಪಾತದಲ್ಲಿ ದೃಶ್ಯಗಳಿವೆ.

ಇಗ್ವಾಸು, ಬ್ರೆಜಿಲ್ ಮತ್ತು ಅರ್ಜೆಂಟೀನಾ ದೇಶಗಳ ಗಡಿ ನಡುವೆ ಹಾದು ಧುಮ್ಮಿಕ್ಕುವ ರುದ್ರ ರಮಣೀಯ ಜಲಪಾತ. ಈ ಜಲಪಾತವನ್ನು ಎರಡು ದೇಶಗಳ ಕಡೆಯಿಂದಲೂ ನೋಡಬಹುದು. ನಾವು ಇಗ್ವಾಸು ಜಲಪಾತವನ್ನು ಬ್ರೆಜಿಲ್ ಭಾಗದಿಂದ ವೀಕ್ಷಿಸಿದೆವು. ಬ್ರೆಜಿಲ್ ಕಡೆಯಿಂದ ಇಗ್ವಾಸುವನ್ನು ಸ್ವಲ್ಪ ದೂರದಿಂದ ನಿಂತು ಪೂರ್ಣಸ್ವರೂಪದಲ್ಲಿ ಕಾಣಬಹುದು.

ಕಣಿವೆಯ ಮೇಲ್ಭಾಗದಿಂದ ನಿಧಾನವಾಗಿ ಇಳಿಯುತ್ತಾ, ಅಂಕುಡೊಂಕಾದ ದಾರಿಯಲ್ಲಿ ಹಲವು 'ಫೋಟೊ ಸ್ಟಾಪ್'ಗಳಲ್ಲಿ ಮರಗಳ ನಡುವೆ ಕಾಣುವ ಜಲಪಾತಗಳನ್ನು ಕಾಣುತ್ತಾ, ವಿವಿಧ ಕೋನಗಳಲ್ಲಿ ಫೋಟೊ ಕ್ಲಿಕ್ಕಿಸುತ್ತಾ ಸಾಗಬಹುದು. ನೀರಿನ ತಳಮಟ್ಟದಲ್ಲಿ ಉದ್ದನೆಯ ಸೇತುವೆಯ ಮೇಲೆ ಸಾಗಿ ಜಲಪಾತವನ್ನು ನೀರಿನ ಸಿಂಪಡಣೆಯೊಂದಿಗೆ ಆಸ್ವಾದಿಸಬಹುದು.

ಇಗ್ವಾಸು ಹಲವು ಹಂತಗಳಲ್ಲಿ, ಹಲವಾರು ಧಾರೆಗಳಲ್ಲಿ ಸುರಿವ ಅಗಾಧ ಜಲಪಾತಗಳ ಗುಚ್ಛ. 2.7 ಕಿ.ಮೀ. ಉದ್ದದ ಬಸಾಲ್ಟ್ ಶಿಲೆಯ ಬಂಡೆಗಲ್ಲ ತುದಿಯಿಂದ ನದಿ ಹಲವು ಕವಲುಗಳಲ್ಲಿ ಧುಮ್ಮಿಕ್ಕುತ್ತಾ ನೂರಾರು ಜಲಧಾರೆಗಳನ್ನು ಸೃಷ್ಟಿಸಿದೆ. ಅತ್ಯಂತ ಸುಂದರವಾದ 275ಕ್ಕೂ ಹೆಚ್ಚು ಜಲಧಾರೆಗಳು ಸುಮಾರು 200ರಿಂದ 270 ಅಡಿ ಎತ್ತರದಿಂದ ಧುಮುಕುತ್ತವೆ.

ಅಮೆರಿಕದ ಅಧ್ಯಕ್ಷರಾಗಿದ್ದ ರೂಸ್ ವೆಲ್ಟ್ ತಮ್ಮ ಹೆಂಡತಿಯೊಂದಿಗೆ ಇಗ್ವಾಸು ಜಲಪಾತವನ್ನು ವೀಕ್ಷಿಸಿ, 'ಅಯ್ಯೋ ಬಡ ನಯಾಗರ ಜಲಪಾತವೆ!' ಎಂದಿದ್ದರು. ಪ್ರಪಂಚದ ಅತಿ ಸುಂದರ ಜಲಪಾತ ಇಗ್ವಾಸು ಎಂಬ ಮಾತಂತೂ ಅಕ್ಷರಶಃ ಸತ್ಯ.

## ಇಗ್ವಾಸು ಎಂಬ ಗಂಗಾವತರಣ

1541ರಲ್ಲಿ ಸ್ಪ್ಯಾನಿಷ್ ಸಾಹಸಿ ಅಲ್ವಾರ್ ನ್ಯೂನೆಜ್ ಕ್ಯಾಬೆಜಾ ಈ ಜಲಪಾತವನ್ನು ನೋಡಿದ ಮೊಟ್ಟಮೊದಲ ವಿದೇಶಿಗ.

ಸ್ಥಳೀಯ ಗ್ವರಾನಿ ಹಾಗೂ ತುಪಿ ಭಾಷೆಯಲ್ಲಿ ವೈವಾಸು ಎಂದರೆ ಅಗಾಧವಾದ ನೀರು. ವೈವಾಸು ಇಗ್ವಾಸು ಆಯಿತು. 1986ರಲ್ಲಿ ಈ ಜಲಪಾತವನ್ನು 'ಯುನೆಸ್ಕೋ ವಿಶ್ವ ಪಾರಂಪರಿಕ ತಾಣ' ಎಂದು ಘೋಷಿಸಲಾಯಿತು.

ಇಗ್ವಾಸು ನದಿ ಬ್ರೆಜಿಲ್‌ನ ಕ್ಯುರಿಟಿಬಾದ ಬೆಟ್ಟಗಳಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಸುಮಾರು 800 ಮೈಲಿಗಳು ಹರಿದು, ಅರ್ಜೆಂಟೀನಾ ಮತ್ತು ಬ್ರೆಜಿಲ್ ದೇಶಗಳ ನಡುವೆ ಇಗ್ವಾಸು ಜಲಪಾತವಾಗಿ ಧುಮುಕಿ ಅರ್ಜೆಂಟೀನಾ, ಬ್ರೆಜಿಲ್ ಮತ್ತು ಪರಾಗ್ವೆ– ಮೂರು ದೇಶಗಳು ಕೂಡುವ ಜಾಗದಲ್ಲಿ ಪರಾನ ನದಿಯೊಂದಿಗೆ ಲೀನವಾಗಿ ಮುಂದೆ ಹರಿಯುತ್ತದೆ.

ವಿಸ್ತಾರವಾಗಿ ಹರಡಿ ನಿಂತ ಇಗ್ವಾಸು ಜಲಪಾತವನ್ನು ನೋಡಲು ಹಲವಾರು ವ್ಯೂ ಪಾಯಿಂಟುಗಳಿವೆ. ಜಲಪಾತದ ಪಕ್ಕ, ತುತ್ತತುದಿ, ಪೂರಾ ಬುಡದಲ್ಲಿ, ಮೇಲಿನಿಂದ, ದೂರದಿಂದ, ಎದುರಿನಿಂದ, ನದಿಯ ಮೇಲೇ ನಡೆದು ಹೋಗಲು ನಡೆದಾರಿಗಳನ್ನು ಸೃಷ್ಟಿಸಲಾಗಿದೆ.



ಇಗ್ವಾಸು ಅಂದ ಕಣ್ತುಂಬಿಕೊಳ್ಳಲು ಪ್ರವಾಸಿಗರ ದಂಡು